**ಪ್ರಮಾಣೀಕರಿಸಿದ ದಿನಾಂಕಃ 24-03-2025**

**<u>ಪಾಟೀಸವಾಲು, ಆರೋಪಿ ಪರ ಶ್ರೀ ಎಂ.ಡಿ. ವಕೀಲರಿಂದಃ</u>**

ನನ್ನ ಮತ್ತು ನನ್ನ ಪತಿಯ ಮದುವೆ ಹಿರಿಯರು ನಿಶ್ಚಯಿಸಿದ್ದು. ನಮ್ಮ ಮದುವೆ ತುರುವೇಕೆರೆ ತಾಲ್ಲೂಕಿನ ಗೋಣಿ ತುಮಕೂರಿನಲ್ಲಿ ನಡೆಯಿತು. ಯಾವ ದಿನಾಂಕ ನೆನಪಿಲ್ಲ, ವರ್ಷ 1992. ನನ್ನ ತಾಯಿ ಮನೆಯಿಂದ ನನ್ನ ಪತಿಗೆ ವರದಕ್ಷಿಣೆಯನ್ನು ಕೊಟ್ಟಿರಲಿಲ್ಲ. ನನ್ನ ಮಗ ಹುಟ್ಟಿದ್ದು 1993. ನಾನು ನನ್ನ ಪತಿ ಅನ್ಯೋನ್ಯವಾಗಿ ಇದ್ವಿ. ನನ್ನ ಪತಿ ಮೃತ ಪಟ್ಟ ಕಾಲಕ್ಕೆ ನಾನು, ನನ್ನ ಪತಿ ಹಾಗೂ ನನ್ನ ಮಗ ನಮ್ಮ ಮನೆಯಲ್ಲಿ ವಾಸವಿದ್ವಿ. ನನ್ನ ಪತಿಯವರು ನಾಲ್ಕು ಜನ ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣು ಮಗಳು. ನನ್ನ ಪತಿ ಮೃತ ಪಡುವ ಕಾಲಕ್ಕೆ ವಿಭಾಗವೇನೂ ಆಗಿರಲಿಲ್ಲ. ನಮ್ಮ ಪತಿಯ ಅಣ್ಣ ತಮ್ಮಂದಿರಲ್ಲಿ ಇಬ್ಬರು ತಿಪಟೂರಿನಲ್ಲಿ ವಾಸವಿದ್ದಾರೆ. ಮತ್ತೊಬ್ಬರು ಎಲ್ಲಿ ಹೋದರೋ ಗೊತ್ತಿಲ್ಲ. ನನ್ನ ಪತಿಯ ಒಟ್ಟು ಕುಟುಂಬದ ಆಸ್ತಿಯನ್ನು ನಮ್ಮ ಅತ್ತೆ ಮತ್ತು ಮಾವರವರು ನೋಡಿಕೊಳ್ಳುತ್ತಿದ್ದರು. ನನ್ನ ಪತಿಗೆ ಒಟ್ಟು ಕುಟುಂಬದಲ್ಲಿ ಎಷ್ಟು ಆಸ್ತಿಯಿತ್ತು ನನಗೆ ಗೊತ್ತಿಲ್ಲ. ಒಟ್ಟು ಕುಟುಂಬದಿಂದ ನಮಗೆ ಆದಾಯವೇನೂ ಇರಲಿಲ್ಲ. ಹೇಮಾವತಿ ಚಾನಲ್ ಗೆ ಸ್ವಲ್ಪ ನಮ್ಮ ಒಟ್ಟು ಕುಟುಂಬದ ಜಮೀನು ಭೂಸ್ವಾಧೀನ ಮಾಡಿಕೊಂಡಿದ್ದರು. ಆ ಪರಿಹಾರದಲ್ಲಿ ನಮಗೆ ಪಾಲು ಕೊಟ್ಟಿಲ್ಲ. ನನ್ನ ಪತಿ ಸಾಕಷ್ಟು ಬಾರಿ ಪರಿಹಾರದ ಹಣದಲ್ಲಿ ಪಾಲು ಕೊಡಿ ಎಂದು ನಮ್ಮ ಅತ್ತೆಯವರನ್ನು ಕೇಳಿದ್ರು ಎಂದರೆ ಸರಿ. ನಮ್ಮ ಅತ್ತೆಯವರ ನಮ್ಮ ಸಂಬಂಧ ಚೆನ್ನಾಗಿಯೇ ಇತ್ತು. ನಮ್ಮ ಮನೆಯ ಅಕ್ಕ ಪಕ್ಕ ಮನೆಗಳು ಇದ್ದವು. ನಮ್ಮ ಮನೆಗೆ ಯಾರಾದರು ಬಂದು ಹೋದರೆ ಅಕ್ಕ ಪಕ್ಕದ ಮನೆಯವರಿಗೆ ಕಾಣುತ್ತದೆ ಎಂದರೆ ಸರಿ. ನಮ್ಮ ಮನೆಯಲ್ಲಿ ಜೋರಾಗಿ ಮಾತನಾಡಿದರೆ ಅಕ್ಕ ಪಕ್ಕದ ಮನೆಯವರಿಗೆ ಕೇಳಿಸುತ್ತದೆ ಎಂದರೆ ಸರಿ. ನನ್ನ ಪತಿ ಮೀನು ಹಿಡಿಯುವ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ಪತಿಯ ತಿಂಗಳಿಗೆ ಅಂದಾಜು ಆದಾಯ ನನಗೆ ಹೇಳಲು ಆಗಲ್ಲ. ನನ್ನ ಪತಿ ಹೊರಗಡೆ ವ್ಯವಹಾರವನ್ನು ನನ್ನ ಬಳಿ ಹೇಳಿಕೊಳ್ಳುತ್ತಿದ್ರು. ಗೋವಿಂದರಾಜುರವರ ಬಳಿ ಬಿಟ್ಟು ಬೇರೆಯವರೊಂದಿಗೆ ವ್ಯವಹಾರ ಇಟ್ಟುಕೊಂಡಿಲ್ಲ. ನನ್ನ ಪತಿ ರಾಜಕೀಯದಲ್ಲಿ ಇರಲಿಲ್ಲ. ನಾನು ಹೇಳುವುದೇನೆಂದರೆ ಅವರು ಮದ್ಯಪಾನ ಸೇವಿಸಿದರೂ ಸಹಾ ಮನೆಗೆ ಬಂದು ಸೇವಿಸುತ್ತಿದ್ದರು. ನನ್ನ ಪತಿ ಬೇರೆ ಊರಿನ ಕೆರೆಗಳಲ್ಲಿ ಮೀನು

ಹಿಡಿಯಲು ಹರಾಜಿನಲ್ಲಿ ಭಾಗವಹಿಸುತ್ತಿದ್ದರು ಎಂದರೆ ಸರಿ. ನನ್ನ ಪತಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಬೇರೆಯವರ ಬಳಿ ವೈರುತ್ವವನ್ನು ಹೊಂದಿದ್ರು ಎಂದರೆ ಸರಿಯಲ್ಲ.

ನನ್ನ ಮಗ ಎಸ್‌ಎಸ್‌ಎಲ್‌ಸಿಯವರೆಗೂ ವಿದ್ಯಾಭ್ಯಾಸ ಮಾಡಿದ್ದಾನೆ. ಪಿಯುಸಿ ಕಾಲೇಜಿಗೆ ಹೋಗಿ ಅರ್ಧದಲ್ಲೇ ಬಿಟ್ಟ. ನನ್ನ ಮಗ ಓದಿದ್ದು ತಂಡಗಾ ಗ್ರಾಮ. ನನ್ನ ಮಗನಿಗೆ ನನ್ನ ಪತಿ ಇರುವ ಕಾಲಕ್ಕೆ ನಾವೇ ಮದುವೆ ನಿಶ್ಚಯ ಮಾಡಿದ್ವಿ. ನನ್ನ ಪತಿ ಮೃತ ಪಟ್ಟ ನಂತರ ಮದುವೆ ಮಾಡಿದ್ವಿ. ಮದುವೆಗೆ ಮೊದಲು ಮದುವೆ ಮಾತುಕತೆ ಮಾಡಿದ್ವಿ. ಮದುವೆ ಹುಡುಗಿ ಕಡೆಯವರೆ ಮಾಡಬೇಕೆಂದು ನಿಶ್ಚಯವಾಗಿತ್ತು. ಈ ವಿಚಾರವಾಗಿ ನಮ್ಮ ಮತ್ತು ಹುಡುಗಿ ಕಡೆಯವರ ನಡುವೆ ಯಾವುದೇ ಬಿನ್ನಾಭಿಪ್ರಾಯ ಇರಲಿಲ್ಲ. ಈಗ ನನ್ನ ಸೊಸೆ ಇಲ್ಲ, ತೀರಿಕೊಂಡಳು. ಆರೋಗ್ಯ ಸರಿಯಿಲ್ಲದೇ ತೀರಿಕೊಂಡಳು.

ನನ್ನ ಪತಿ ಕೆಲಸಕ್ಕೆ ಹೋಗಲು ಬೆಳಗ್ಗೆ 10 ಗಂಟೆಗೆ ಮನೆ ಬಿಡುತ್ತಿದ್ದರು. ಸಾಮಾನ್ಯವಾಗಿ ಮೀನು ಹಿಡಿಯುವವರು ಬೆಳಗ್ಗೆ 5.30 ಗಂಟೆಗೆ ಕೆಲಸಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ. ನನ್ನ ಪತಿಗೆ ಯಾವುದೇ ರೀತಿಯ ಚಟ ಇರಲಿಲ್ಲ. ನಾನು ಹೇಳುವುದೇನೆಂದರೆ ಅವರಿಗೆ ಮಧ್ಯಪಾನ ಸೇವಿಸುವ ಹಾಗೂ ಬೀಡಿ ಸೇದುವ ಅಭ್ಯಾಸ ಇತ್ತು. ನನ್ನ ಪತಿಗೆ ಇಸ್ಪೀಟ್ ಆಡುವ ಅಭ್ಯಾಸ ಇರಲಿಲ್ಲ. ನನ್ನ ಮಗ ಬೆಂಗಳೂರಿನಲ್ಲಿ ಏರ್ ಟೆಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ನನ್ನ ಮಗ ಬೆಂಗಳೂರಿನಲ್ಲೇ ವಾಸವಿದ್ದಾನೆ. ಆಗಾಗ್ಗೆ ಅಂದರೆ ಹದಿನೈದು ದಿನಕ್ಕೆ ಮನೆಗೆ ಬರುತ್ತಾನೆ.

ಆ ದಿನ ಅಂದರೆ ನನ್ನ ಪತಿ ಮೃತ ಪಡುವ ಹಿಂದಿನ ದಿನ ರಾತ್ರಿ ರೂ.30,000/- ಬ್ಯಾಂಕಿನಿಂದ ತಂದಿದ್ರು. ಹಣವನ್ನು ನನ್ನ ಕೈಯಲ್ಲೇ ಕೊಟ್ರು. ತಂಡಗಾ ಬ್ರ್ಯಾಂಚ್ ಇಂಡಿಯನ್ ಓವರ್ ಸೀಸ್ ಬ್ಯಾಂಕಿನಿಂದ ಹಣ ತಂದಿದ್ರು. ನನ್ನ ಪತಿಯೇ ನನಗೆ ಈ ವಿಚಾರವನ್ನು ಹೇಳಿದ್ರು. ನಾನು ಬ್ಯಾಂಕಿಗೆ ಹೋಗಿರಲಿಲ್ಲ. ನಾನು ನೋಟುಗಳ ಮುಖಬೆಲೆಯನ್ನು ಈಗ ಹೇಳಲು ಆಗಲ್ಲ. ದಿನಾಂಕ 16.02.2019 ರಂದು ನನ್ನ ಪತಿ ಕೆಲಸಕ್ಕೆ ಹೋಗಿರಲಿಲ್ಲ. ಬ್ಯಾಂಕಿಗೆ 11 ಗಂಟೆಗೆ ಹೋಗಿದ್ರು. ಮನೆಗೆ ಬಂದಿದ್ದು 1 ಗಂಟೆ ಸಮಯಕ್ಕೆ 1 ಗಂಟೆಯ ನಂತರ ಹೊರಗೆ ಹೋಗಿದ್ರು. ಎಲ್ಲಿ ಹೋಗಿದ್ರು ಗೊತ್ತಿಲ್ಲ. ಊಟ ಮಾಡಿಕೊಂಡು 2 ಗಂಟೆಗೆ ಮನೆ ಬಿಟ್ರು. ಮತ್ತೆ 4 ಗಂಟೆಗೆ ಮನೆಗೆ ಬಂದ್ರು. ಬ್ಯಾಂಕಿಂದ ಹಣ ತಂದ ತಕ್ಷಣ ಹಣ ನನ್ನ ಕೈಯಲ್ಲಿ ಕೊಟ್ಟಿದ್ರು ಎಂದರೆ ಸರಿ. ಆ ದಿನ ಬೆಳಗ್ಗೆ ಪಲಾವ್ ತಿಂದಿದ್ರು. ಮುದ್ದೆ ಚಿಕನ್ ಸಾರು ಮಧ್ಯಾಹ್ನ ತಿಂದಿದ್ರು.

ಪುನಃ ಸಂಜೆ ತಿನ್ನುವಾಗ ಫೋನ್ ಬಂದಿದ್ದು. ಸಂಜೆ ಊಟ ಮಾಡುವ ಮೊದಲು ಮದ್ಯಪಾನ ಸೇವಿಸಿದ್ರು. ಊಟ ಮಾಡದೇ ಎದ್ದು ಹೋದ್ರು. ನನ್ನ ಪತಿ ಬಳಸುತ್ತಿದ್ದ ಫೋನ್ ನ ಕಂಪನಿಯ ಹೆಸರು ನನಗೆ ಗೊತ್ತಿಲ್ಲ. ನನ್ನ ಪತಿಯ ಫೋನ್ ನಂಬರ್ ನನಗೆ ನೆನಪಿಲ್ಲ. ಏರ್ ಟೆಲ್ ಕಂಪನಿಯ ಸಿಮ್ ನ್ನು ಬಳಸುತ್ತಿದ್ರು. ಫೋನ್ ಮತ್ತು ಸಿಮ್ ನನ್ನ ಪತಿಯ ಹೆಸರಿನಲ್ಲಿಯೇ ಇದ್ದವು. ನನ್ನ ಪತಿ ಏಳು ಎಂಟು ವರ್ಷಗಳಿಂದ ಸಿಮ್ ಬಳಸುತ್ತಿದ್ರು. ನನ್ನ ಪತಿ ಒಬ್ಬರೇ ಅವರ ಫೋನ್ ನ್ನು ಉಪಯೋಗಿಸುತ್ತಿದ್ದರು. ಸಿಮ್ ತೆಗೆದುಕೊಳ್ಳುವಂತಹ ಸಮಯದಲ್ಲಿ ಯಾವ ಯಾವ ದಾಖಲೆಗಳನ್ನು ಕೊಟ್ಟಿದ್ರು ನನಗೆ ಗೊತ್ತಿಲ್ಲ. ಊಟ ಮಾಡುವಾಗಲೇ ಫೋನ್ ಬಂತು. ಯಾರು ಫೋನ್ ಮಾಡಿದ್ರು ಗೊತ್ತಿಲ್ಲ. ಏನು ಮಾತನಾಡಿದ್ರು, ಎಷ್ಟು ಹೊತ್ತು ಮಾತನಾಡಿದ್ರು ಎಂದು ಗೊತ್ತಿಲ್ಲ. ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ. ಹಾಫ್ ಶರ್ಟ್, ಪ್ಯಾಂಟ್ ಮತ್ತು ಜರ್ಕಿನ್ ಹಾಕಿಕೊಂಡು ಹೋದರು. ಮಾಸಲು ಕಲರ್ ಪ್ಯಾಂಟ್ ಹಾಕಿದ್ರು, ಸಣ್ಣ ಸಣ್ಣ ಚೌಕಳಿ ಶರ್ಟ್, ಮಾಸಲು ಕಲರ್ ನ ಜರ್ಕಿನ್ ಹಾಕಿಕೊಂಡು ಹೋಗಿದ್ರು. ಕ್ಯಾಲಿಬರ್ ಬೈಕ್ ನಲ್ಲಿ ಹೋಗಿದ್ರು. ನಾನು ಪೊಲೀಸ್ ನವರಿಗೆ ನನ್ನ ಪತಿ ಉಪಯೋಗಿಸುತ್ತಿದ್ದ ಸಿಮ್ ಮತ್ತು ಫೋನ್ ನ ಕಂಪನಿಯ ಹೆಸರನ್ನು ಹೇಳಿಲ್ಲ. ನಾನು ಉಪಯೋಗಿಸುತ್ತಿದ್ದ ಫೋನ್ ಪೊಲೀಸ್ ನವರು ತೆಗೆದುಕೊಳ್ಳಲಿಲ್ಲ. ನನ್ನ ಫೋನ್ ನ ವಿವರಗಳನ್ನು ಪೊಲೀಸ್ ನವರಿಗೆ ಹೇಳಿಲ್ಲ. ಆ ದಿನ ರಾತ್ರಿ 8.30 ಗಂಟೆ ಸಮಯಕ್ಕೆ ನನ್ನ ಫೋನ್ ಗೆ ನನ್ನ ಪತಿಯ ಫೋನ್ ನಿಂದ ಫೋನ್ ಬಂತು. ಹಲೋ ಎಂದು ಹೇಳಿ ಕಟ್ ಮಾಡಿದ್ರು. ಆ ಸಮಯದಲ್ಲಿ ನನ್ನೊಂದಿಗೆ ಯಾರೂ ಇರಲಿಲ್ಲ. ಫೋನ್ ಕಟ್ಟಾದಾಗ ನನಗೇನೂ ಗಾಬರಿ ಆಗಲಿಲ್ಲ. ನಾನು ಈ ವಿಷಯವನ್ನು ಯಾರಿಗೂ ತಿಳಿಸಲು ಪ್ರಯತ್ನ ಮಾಡಲಿಲ್ಲ. ನನ್ನ ಪತಿಯನ್ನು ಹುಡುಕಲು ಪ್ರಯತ್ನವನ್ನು ನಾನು ಮಾಡಲಿಲ್ಲ. ನನ್ನ ಪತಿ ಬೆಳಗ್ಗೆ ಬರುತ್ತೀನಿ, ಮಲಗು ಎಂದು ಹೇಳಿದ್ರು. ಆದ್ದರಿಂದ ನಾನು ಹುಡುಕಲು ಪ್ರಯತ್ನ ಮಾಡಲಿಲ್ಲ. ಪೊಲೀಸ್ ನವರಿಗೆ ಈ ವಿಷಯವನ್ನು ನಾನು ಹೇಳಿದ್ದೇನೆ. ದೂರಿನಲ್ಲೂ ಸಹಾ ಬರೆಸಿದ್ದೇನೆ. ಎಲ್ಲಿ ಹೋಗುತ್ತೇನೆ, ಯಾವ ವಿಚಾರಕ್ಕೆ ಹೋಗುತ್ತೇನೆ ಎಂದು ನನ್ನ ಪತಿ ನನಗೆ ತಿಳಿಸಲಿಲ್ಲ. ನಾನೂ ಸಹಾ ಅವರನ್ನು ಎಲ್ಲಿಗೆ ಹೋಗುತ್ತಾರೆ ಎಂದು ಕೇಳಲಿಲ್ಲ.

ಮರುದಿನ ಬೆಳಗ್ಗೆ 7 ಗಂಟೆಯವರೆಗೂ ನಾನು ನನ್ನ ಪತಿಗೆ ಫೋನ್ ಮಾಡಲಿಲ್ಲ. ನಾನು ಆ ದಿನ 6 ಗಂಟೆಗೆ ಎದ್ದೆ. ಬಾಗಿಲು ಸಾರಿಸುತ್ತಿದ್ದೆ. ಆಗ

ಸುಶೀಲಮ್ಮ ನನಗೆ ವಿಷಯ ತಿಳಿಸಿದ್ರು. ಅದಕ್ಕೂ ಮೊದಲು ನನ್ನ ಪತಿ ರಾತ್ರಿ ಬಂದಿಲ್ಲವೆಂದು ತಿಳಿದುಕೊಳ್ಳುವ ಪ್ರಯತ್ನ ನಾನು ಮಾಡಿಲ್ಲ. ಫೋನ್ ಮಾಡಿದ್ರೆ ಬೈಯುತ್ತಿದ್ರು, ಅದಕ್ಕೆ ನಾನು ಮಾಡಿಲ್ಲ. ಸುಶೀಲಮ್ಮನಿಗೆ ಈ ವಿಚಾರ ಯಾರು ಹೇಳಿದರು ನನಗೆ ಗೊತ್ತಿಲ್ಲ. ನಮ್ಮ ಅತ್ತೆ ಮಾವ, ಅಕ್ಕಪಕ್ಕದವರು ಎಲ್ಲರೂ ಬಂದಿದ್ರು. ನಮ್ಮ ಮನೆಯಿಂದ ರಾಮಮಂದಿರ ನೂರು ಮೀಟರ್ ದೂರ. ಸಮಯ 7 ಗಂಟೆಯಾಗಿತ್ತು. ನಾನು ಹೋಗುವ ಸಮಯಕ್ಕೆ ಪೊಲೀಸ್ ನವರು ಬಂದಿರಲಿಲ್ಲ. ನಾನು ಹೋಗುವ ಮೊದಲು ಸುಮಾರು ಜನ ಸೇರಿದ್ರು ಎಂದರೆ ಸರಿ. ನಾನು ಸ್ಥಳಕ್ಕೆ ಹೋದಾಗ ನನ್ನ ಫೋನ್ ತೆಗೆದುಕೊಂಡು ಹೋಗಿದ್ದೆ. ನಾನು ಈ ವಿಷಯವನ್ನು ಫೋನ್ ಮಾಡಿ ನನ್ನ ಪತಿಯ ಸ್ನೇಹಿತರಿಗೆ ತಿಳಿಸಿದೆ. ನಾನು ಅವರಿಗಷ್ಟೆ ತಿಳಿಸಿದ್ದು. ಅವರಿಗೆ ನನ್ನ ಮಗನಿಗೆ ತಿಳಿಸಲು ಕೋರಿದ್ದೆ. ಈ ವಿಚಾರವನ್ನು ನಾನು ಪೊಲೀಸ್ ನವರಿಗೆ ಹೇಳಿಕೆ ಸಮಯದಲ್ಲಿ ಅಥವಾ ದೂರು ಕೊಡುವ ಸಂದರ್ಭದಲ್ಲಿ ತಿಳಿಸಿಲ್ಲ. ಪೊಲೀಸ್ ನವರಿಗೆ ಈ ವಿಷಯವನ್ನು ನಾನು ತಿಳಿಸಲು ಪ್ರಯತ್ನ ಮಾಡಿಲ್ಲ.

ನನ್ನ ಪತಿಯ ತಲೆಗೆ ಎರಡು ಕಡೆ ಏಟಾಗಿತ್ತು. ಇನ್ನಿತರೆ ದೇಹದ ಭಾಗಗಳಿಗೆ ಏಟಾಗಿರಲಿಲ್ಲ. ಜಾಗದಲ್ಲಿ ನನ್ನ ಪತಿಯ ಫೋನ್, ಫೋನ್ ನಂಬರ್ ಬರೆದಿದ್ದ ಬುಕ್, ಚೀಟಿಗಳು ಎಲ್ಲಾ ಬಿದ್ದಿದ್ದವು. ಮೊಬೈಲ್ ಕಾಲಿನ ಬಳಿ ಬಿದ್ದಿತ್ತು. ಅದನ್ನು ಪೊಲೀಸ್ ನವರು ತೆಗೆದುಕೊಂಡ್ರು. ಮೊಬೈಲ್ ಪೊಲೀಸ್ ನವರ ಬಳಿಯೇ ಇದೆ. ದೇವಸ್ಥಾನದ ಬಳಿ ಬೈಕ್ ಸಹಾ ನಿಲ್ಲಿಸಲಾಗಿತ್ತು. ಬೈಕ್ ಯಾರ ಹೆಸರಿನಲ್ಲಿ ಇದೆ ಗೊತ್ತಿಲ್ಲ. ಬೇರೆಯವರಿಗೆ ಮಾರಾಟ ಮಾಡಿದ್ದೇವೆ. ಬೈಕ್ ನ್ನು ಪೊಲೀಸ್ ನವರು ತನಿಖೆ ಮಾಡಿ ಸೀಜ್ ಮಾಡಿಲ್ಲ. ನನ್ನ ಪತಿಯ ಜೇಬಿನಲ್ಲಿ ಹಣ ಇತ್ತೆ ನಾನು ನೋಡಿಲ್ಲ. ನನ್ನ ಪತಿ ಕೊರಳಿಗೆ ಚೈನ್ ಅಥವಾ ಬೆರಳಿಗೆ ಉಂಗುರವನ್ನು ಧರಿಸಿರಲಿಲ್ಲ. ಕೈಯಲ್ಲಿ ವಾಚ್ ಇತ್ತು. ವಾಚ್ ನಮ್ಮ ಬಳಿಯೇ ಇದೆ. ನನಗೆ ಓದಲು ಬರೆಯಲು ಬರುವುದಿಲ್ಲ. ದೂರು ಬರೆಸಿ ಕೊಟ್ಟಿದ್ದು. ಪೊಲೀಸ್ ಠಾಣೆಗೆ ಹೋಗುವಷ್ಟರಲ್ಲಿ 11 ಗಂಟೆಯಾಗಿತ್ತು. ದೂರು ಕೊಡಲು ನಾನು ಮತ್ತು ನನ್ನ ಮಗ ಹೋಗಿದ್ವಿ ನನ್ನ ಮಗ ಬೆಂಗಳೂರಿನಿಂದ ಬಂದಿದ್ದ. ಪೊಲೀಸ್ ನವರು 8 ಗಂಟೆಗೆ ಶವವನ್ನು ಆಟೋದಲ್ಲಿ ತೆಗೆದುಕೊಂಡು ಹೋದ್ರು. ನಮ್ಮನ್ನು ಜೀಪ್ ನಲ್ಲಿ ಕೂರಿಸಿಕೊಂಡು ಹೋದ್ರು. ಪೊಲೀಸ್ ನವರಿಗೆ ಯಾರು ವಿಚಾರವನ್ನು ತಿಳಿಸಿದ್ರು ನನಗೆ ಗೊತ್ತಿಲ್ಲ. ನನ್ನ ಪತಿಯ ದೇಹವನ್ನು ನೋಡಿದಾಗ ಯಾರೋ ಕೊಲೆ ಮಾಡಿರುವ ಅನುಮಾನ ಬಂತು. ದೂರಿನಲ್ಲಿ ಕೊಲೆಯಾಗಿದೆ ಎಂದು

ಅನುಮಾನವಿದೆ, ತನಿಖೆ ಮಾಡಿ ಎಂದು ತಿಳಿಸಿದ್ದೇನೆ. ದೂರಿನಲ್ಲಿ ಆರೋಪಿ ಕೊಲೆ ಮಾಡಿದ್ದಾನೆಂದು ತಿಳಿಸಿ ಬರೆಸಿಲ್ಲ. ನಾನು ಕೊಲೆ ಎಂದು ಅನುಮಾನವಿದೆ ಎಂದು ಪೊಲೀಸ್ ನವರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ.

ಕೃತ್ಯ ನಡೆದ ಜಾಗ ಮೂರು ಕಡೆ ರಸ್ತೆ ಸೇರುವ ಸ್ಥಳ ಎಂದರೆ ಸರಿ. ಅಲ್ಲಿ ಯಾವಾಗಲೂ ವಾಹನಗಳ ಮತ್ತು ಜನಸಂದಣಿ ಇರುತ್ತದೆ ಎಂದರೆ ಸರಿ. ಆ ಸ್ಥಳದ ಅಕ್ಕ ಪಕ್ಕ ಮನೆಗಳು ಇವೆ ಎಂದರೆ ಸರಿ. ಅಲ್ಲಿ ನಾಗೇಂದ್ರ ಎನ್ನುವವರ ಮನೆ ಸಹಾ ಇದೆ ಎಂದರೆ ಸರಿ. ಅಲ್ಲಿ ಎಲ್ಲಾ ಮನೆಗಳಲ್ಲಿ ಜನ ವಾಸವಿದ್ದಾರೆ ಎಂದರೆ ಸರಿ. ಯಾರಾದುರೂ ಕೂಗಿದರೆ, ಕಿರುಚಿದರೆ, ನರಳಾಡಿದ್ರೆ ಎಲ್ಲರಿಗೂ ಕೇಳಿಸುತ್ತದೆ ಎಂದರೆ ಸರಿ. ಅಲ್ಲಿ ಒಂದು ಲೈಟ್ ಕಂಬ ಇದೆ ಎಂದರೆ ಸರಿ. ಅದು ರಾತ್ರಿಯೆಲ್ಲಾ ಉರಿಯುತ್ತದೆ ಎಂದರೆ ಸರಿ. ಅಲ್ಲಿ ಏನೇ ಘಟನೆ ನಡೆದರೂ ಜನರಿಗೆ ಅಲ್ಲಿಂದ ಕಾಣುತ್ತದೆ ಎಂದರೆ ಸರಿ.

ಯಾವುದೇ ಕೊಲೆ ನಡೆದಿಲ್ಲ ಎಂದರೆ ಸರಿಯಲ್ಲ. ಕೇಸ್ ಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ರಾಮಮಂದಿರಕ್ಕೆ ಮೂರು ಮೆಟ್ಟಿಲುಗಳು ಇವೆ ಎಂದರೆ ಸರಿ. ಆ ಮೆಟ್ಟಿಲುಗಳು ಕಡಿದಾಗಿವೆ ಎಂದರೆ ಸರಿ. ಒಂದು ಮೆಟ್ಟಿಲಿಗೂ ಮತ್ತೊಂದಕ್ಕೂ ಮೂರು ಅಡಿ ಇದೆ ಎಂದರೆ ಸರಿಯಲ್ಲ. ಆ ಮೆಟ್ಟಿಲುಗಳನ್ನು ಸಾಧಾರಣ ಮನುಷ್ಯ ಹತ್ತಲು ಆಗುವುದಿಲ್ಲ ಎಂದರೆ ಸರಿಯಲ್ಲ. ಕೊಲೆಯೇನಾದರೂ ಆಗಿದ್ರೆ ಅಕ್ಕ ಪಕ್ಕದ ಮನೆಯವರಿಗೆ ಗೊತ್ತಾಗುತ್ತಿತ್ತು ಎಂದರೆ ಸರಿಯಲ್ಲ.

ಆರೋಪಿ ಮತ್ತು ನನ್ನ ಪತಿಯ ನಡುವೆ ಒಂದು ಕ್ರಿಮಿನಲ್ ಪ್ರಕರಣ ಇದ್ದಿದ್ದರಿಂದ ಪಿತೂರಿ ನಡೆಸಿ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಕ್ಕಿ ಹಾಕಿಸಿದ್ದೀವಿ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಪುಷ್ಪಾವತಿ.ವಿ)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**